# ಸಮಾಜ ಮತ್ತು ಸಾಹಿತ್ಯ

## (ಎ. ಪಂಕಜ ಮತ್ತು ಎ.ಪಿ. ಮಾಲತಿ ಅವರ ಕಾದಂಬರಿಗಳನ್ನು ಅನುಲಕ್ಷಿಸಿ)

ಮಾರ್ಗದರ್ಶಕರು
ಡಾ. ಪುಟ್ಟಸ್ವಾಮಿ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಸ್ನಾತಕೋತ್ತರ ಕೇಂದ್ರ
ಮೈಸೂರು ವಿಶ್ವವಿದ್ಯಾಲಯ,
ಹೇಮಗಂಗೋತ್ರಿ, ಹಾಸನ

ಸಂಶೋಧನಾ ವಿದ್ಯಾರ್ಥಿ
ಪುಟ್ಟಸ್ವಾಮಿ ಎನ್. ಎನ್
ಸಂಶೋಧನಾ ವಿದ್ಯಾರ್ಥಿ, ಕನ್ನಡ
ವಿಭಾಗ ಸ್ನಾತಕೋತ್ತರ ಕೇಂದ್ರ
ಮೈಸೂರು ವಿಶ್ವವಿದ್ಯಾಲಯ,
ಹೇಮಗಂಗೋತ್ರಿ, ಹಾಸನ

ಸಾಹಿತ್ಯ ಒಂದು ಸಂಸ್ಕೃತಿಯ ಅಭಿವ್ಯಕ್ತಿ ಮಾಧ್ಯಮ. ಯಾವುದೇ ಪರಿಸರದ ಸಾಂಸ್ಕೃತಿಕ ಚಿಂತನೆಯನ್ನು ಮುಕ್ತವಾಗಿ ತೆರೆದಿಡಲು ಅದೊಂದು ಸೂಕ್ತ ಸಾಧನವೂ ಹೌದು. ಅದು ಮಾನವನ ಸೃಷ್ಟಿಯಾದರೂ ಸಾಹಿತ್ಯಿಕ ಕೇಂದ್ರಬಿಂದು ಮಾನವನೇ ಆಗಿರುವುದು ವಿಶೇಷ. ಅಂದರೆ ಸಮಾಜ ಹಾಗೂ ಸಾಹಿತ್ಯ ಏಕತಾನತೆಯನ್ನು ಮೈಗೂಡಿಸಿಕೊಂಡಿವೆ. ಆಂಗಿಕಾಭಿನಯ, ಭಾಷಿಕ, ಜನಪದ, ಲಿಪಿಯ ಆವಿಷ್ಕಾರ, ಬರಹ ರೂಪದ ಸಾಹಿತ್ಯ ಹೀಗೆ ಮಾನವನ ಬದುಕಿನಲ್ಲಿ ಸಾಹಿತ್ಯ ಹಂತ ಹಂತವಾಗಿ ಸಾಗಿ ಬಂದಿತು. ಅಲ್ಲಿಂದೀಚೆಗೆ ಭಾಗಶಃ ನಿಜಸಂಗತಿಗಳು ಯಥಾವತ್ತಾಗಿ ಅಚ್ಚಾಗತೊಡಗಿತು. ಇದರಿಂದ ಭವಿಷ್ಯದ ತಲೆಮಾರು ಪರಂಪರೆಯ ಅಸ್ಮಿತೆಯ ಬಗೆಗೆ ಹೆಮ್ಮೆಪಡಲೂ ಸಾಧ್ಯವಾಯಿತು. ಇಂದು ಸಾಹಿತ್ಯ ಇಡೀ ಜಗತ್ತನ್ನೇ ತನ್ನೊಳಗು ಮಾಡಿಕೊಂಡಿದ್ದು ಅದನ್ನು ವಿಶ್ವ ಸಾಹಿತ್ಯವೆಂದರೂ ಅತಿಶಯೋಕ್ತಿಯಾಗಲಾರದು. ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಸಾಹಿತ್ಯದ ಹರವು ಇದೆ. ಮನುಷ್ಯ ತಾನು ಹಂಚಿಕೊಳ್ಳಲಾಗದ ಭಾವನೆಗಳನ್ನು ತನ್ನ ಬರವಣಿಗೆಯ ಮುಖೇನ ಅಭಿವ್ಯಕ್ತಿಸಲು ಸೂಕ್ತಮಾರ್ಗೋಪಾಯವಾಗಿದೆ.

ನವಯುಗದ ಸಾಹಿತ್ಯಿಕ ಪರಿವರ್ತನೆ ಸಾಕಷ್ಟು ವೈಭವೋಪೇತವಾಗಿದ್ದು ಸದ್ದುಗದ್ದಲವಿಲ್ಲದೆ ಸಾಗುತ್ತಿರುವುದೇ ವಿಶೇಷ. ಭಾರತೀಯ ಸಾಹಿತ್ಯದ ಪರಿಕಲ್ಪನೆಯು ಸ್ವಾತಂತ್ರ್ಯ ಪಡೆದ ನಂತರದ ಆಗುಹೋಗುಗಳನ್ನು ಬಿಂಬಿಸುತ್ತದೆ. ಸಂಸ್ಕೃತದಲ್ಲಿ ರಚನೆಗೊಂಡ ಋಗ್ವೇದವೇ ಭಾರತೀಯ ಸಾಹಿತ್ಯದ ಆದಿ ಎಂಬುದು ಪರಂಪರೆಯನ್ನು ಅವಲೋಕಿಸಿದಾಗ ಅರಿವಾಗುತ್ತದೆ. ರಾಮಾಯಣ, ಮಹಾಭಾರತ ಭಾಗವತಗಳ ವಸ್ತು, ರಚನೆ, ಆಶಯಗಳು ಮನುಕುಲದ ಉದ್ಧಾರವನ್ನೇ ಬಯಸುತ್ತವೆ. ನಂತರದಲ್ಲಿ ತಮಿಳು, ಕನ್ನಡ, ಮರಾಠಿ, ಗುಜರಾತಿಯೂ ಸೇರಿದಂತೆ

ದೇಶದ ಹಲವಾರು ಭಾಷೆಗಳಲ್ಲಿ ಸಾಹಿತ್ಯ ಸೃಷ್ಟಿಯಾಯಿತು. "ಯಾವುದೇ ಸಮಾಜದಲ್ಲಿಯೇ ಆಗಲಿ ಅಲ್ಲಿನ ಆಗುಹೋಗುಗಳ ಬಗ್ಗೆ ಸೂಕ್ಷ್ಮ ಸಂವೇದನಾಶೀಲನಾದ ವ್ಯಕ್ತಿ ಉಳಿದವರಿಗಿಂತ ಹೆಚ್ಚು ಸೂಕ್ಷ್ಮವಾಗಿ, ಹೆಚ್ಚು ತೀವ್ರವಾಗಿ ಸ್ಪಂದಿಸುತ್ತಾನೆ".೧ ಇಂಥಾ ಸಂವೇದನಾಶೀಲ ಸಾಮಾಜಿಕರು ತಮ್ಮ ಅನುಭವಗಳನ್ನು ನಂತರದ ತಲೆಮಾರಿಗೆ ಕಾಪಿಡಲು ಪ್ರಯತ್ನಿಸಲಾಗಿ, ಲಿಪಿ, ತಾಳೆಗರಿ, ತೊಗಟೆಗಳು, ಹಸಿ ಮಡಕೆ, ಕಲ್ಲುಬಂಡೆ, ಕಾಗದ, ಪೆನ್ನುಗಳು ಕಾಲಾಂತರದಲ್ಲಿ ಮುದ್ರಣ ಯಂತ್ರ ಸೃಷ್ಟಿಸಲ್ಪಟ್ಟು ಇಂದು ಕಂಪ್ಯೂಟರ್ ಯುಗಕ್ಕೆ ಬಂದು ನಿಂತಿದ್ದೇವೆ. ಕನ್ನಡ ಸಾಹಿತ್ಯವನ್ನು ಅವಲೋಕಿಸುವುದಾದರೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಂತೂ ಸಮಸಮಾಜವನ್ನು ಬಿಂಬಿಸುವ ಸಾಕಷ್ಟು ಪ್ರಯತ್ನ ನಡೆಯಿತು. ತದನಂತರದಲ್ಲಿ ಬಂದ ವಚನ ಸಾಹಿತ್ಯವಂತೂ ಮಾನವ ಬದುಕನ್ನು ಸಾರ್ಥಕಗೊಳಿಸಲೆತ್ನಿಸಿತು. ಅಂತೆಯೇ ಆಧುನಿಕ ಸಾಹಿತ್ಯವೂ ಕೂಡ ಮಾನವ ಜೀವನವನ್ನೇ ತಮ್ಮ ಬರಹಕ್ಕೆ ಸ್ಫೂರ್ತಿಯಾಗಿಸಿಕೊಂಡು ಬರೆಯುತ್ತಿದ್ದು ತಿದ್ದಿ ತೀಡುವ ಕಾರ್ಯ ಅವ್ಯಾಹತವಾಗಿ ನಡೆಯುತ್ತಿದೆ. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ ಸಾಹಿತ್ಯದಂತೆಯೇ ಮಹಿಳಾ ಸಾಹಿತ್ಯ ಪರಂಪರೆಯೂ ಕೂಡ ಸಮಸಮಾಜವನ್ನು ಸಾಂದರ್ಭಿಕವಾಗಿ ತಿದ್ದುವ ಕೆಲಸ ಮಾಡುತ್ತಲೇ ಬಂದಿದೆ.

"ಸಾಹಿತ್ಯ ಅರಳುವುದೇ ಬದುಕಿನಿಂದ, ಲಿಪಿಯಿಲ್ಲದ ಕಾಲದಿಂದಲೂ ಜನರ ಮನದಲ್ಲಿ, ಭಾವನೆಗಳಲ್ಲಿ, ಹಾಡು ನುಡಿಗಳಲ್ಲಿ ಸಾಹಿತ್ಯ ತೆರೆದುಕೊಳ್ಳುತ್ತಿತ್ತು".೨ ಅಂತೆಯೇ ಸಾಹಿತ್ಯವನ್ನು ಬಳಸಿಕೊಂಡಷ್ಟೂ ಸಾಮಾಜಿಕ ಬದುಕು ಬಲು ವಿಸ್ತಾರವೆನಿಸಿತು. ಅಲ್ಲದೇ ಸಾಹಿತ್ಯದ ಸಮರ್ಪಕ ದುಡಿಮೆ ಭವಿಷ್ಯದ ತಲೆಮಾರಿಗೆ ಮಾರ್ಗದರ್ಶಿಯಾಗುತ್ತದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾದಂಬರಿ ಪ್ರಕಾರವು 'ಪುಟ್ಟ ಮಹಾಕಾವ್ಯ' ಎಂದೇ ಬಣ್ಣಿಸಲ್ಪಟ್ಟಿದೆ. ನಂಜನಗೂಡು ತಿರುಮಲಾಂಬ ಅವರಿಂದ ಪ್ರಾರಂಭವಾದ ಆಧುನಿಕ ಯುಗದ ಈ ಮಹಿಳಾ ಪರಂಪರೆ ಇಂದಿಗೂ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ. ವಾಣಿ, ತ್ರಿವೇಣಿ, ಅನುಪಮಾ ನಿರಂಜನ, ಎನ್.ಪಂಕಜ, ಉಷಾ ಪಿ ರೈ ಮುಂತಾದ ಹಿರಿಯ ಮಹಿಳಾ ಬರಹಗಾರರಂತೇ ಎ.ಪಂಕಜ ಹಾಗೂ ಎ.ಪಿ. ಮಾಲತಿ ಅವರ ಸೃಜನತೆಯೂ ಕೂಡ ಶ್ಲಾಘನೀಯ. ಎ.ಪಂಕಜ ಹಾಗೂ ಎ.ಪಿ. ಮಾಲತಿ ಅವರ ಕಾದಂಬರಿಗಳು ಸಮಾಜದ ಭೌತಿಕಕ್ಕಿಂತ ಮಾನವನ ಬೌದ್ಧಿಕ ಹಾಗೂ ಮಾನಸಿಕ ಕ್ಷೇತ್ರವನ್ನು ಹೇಗೆ ಪ್ರಭಾವಿಸಿವೆ ಎಂಬ ವಿಚಾರದ ಹಿನ್ನೆಲೆಯಲ್ಲಿ ಇಲ್ಲಿ ಚರ್ಚಿಸಲಾಗಿದೆ.

ಎ. ಪಂಕಜ ಹಾಗೂ ಎ.ಪಿ. ಮಾಲತಿ ಇವರೀರ್ವರೂ ಸಹ ಸಾಮಾಜಿಕ ಮೌಲ್ಯಗಳು ಹಾಗೂ ಪ್ರಸಕ್ತ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಬರಹದೊಳಗೆ ಚರ್ಚಿಸಿ ಸಾಹಿತ್ಯ ರಚಿಸಿದವರು. ಎ.ಪಿ. ಮಾಲತಿಯವರು

ಇಂದಿಗೂ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರು. ಸತತ ಪ್ರಯತ್ನ ಹಾಗೂ ಕರ್ತವ್ಯ ಪ್ರಜ್ಞೆಯೆಡೆಗೆ ಸದಾ ಜಾಗೃತರಾಗಿರುವ ಲೇಖಕಿಯರು ಸಮಾಜವನ್ನು ಕಟ್ಟುವಲ್ಲಿ ನಿಷ್ಣಾತರು. ಮನುಷ್ಯನಿಗೆ ಬರೆಯುವ ಸ್ವಾತಂತ್ರವಿದೆ ಎಂದಾಕ್ಷಣ ಬರೆದದ್ದೆಲ್ಲವೂ ಸಾಹಿತ್ಯವಾಗದು. ಉದ್ದೇಶಿತ ಗುರಿಯೆಡೆಗೆ ಸಾಗುವುದಲ್ಲದೇ ಮನರಂಜನೆ, ಬೌದ್ಧಿಕ, ವೈಚಾರಿಕ, ವೈಜ್ಞಾನಿಕ ಚಿಂತನೆಗೆ ಪ್ರೇರಕವಾಗಬೇಕು. ಎಲ್ಲಾ ಎಲ್ಲೆಗಳನ್ನು ಮೀರಿ ನಿಂತು ಸಮಾಜದ ಎಲ್ಲಾ ಸ್ತರಗಳಲ್ಲೂ ಸಾಹಿತ್ಯ ಪ್ರಜ್ಞೆ ಮೂಡಿಸುವಂತಾಗಬೇಕು. ಈ ನಿಟ್ಟಿನಲ್ಲಿಯೇ ಎ. ಪಂಕಜ ಅವರ ಭಾಗಶಃ ಎಲ್ಲಾ ಕಾದಂಬರಿಗಳೂ ದುಡಿದಿವೆ.

ಸಲ್ಲದ ಆಸೆ ಆಮಿಷಗಳಿಗೆ ಒಳಗಾದವರಿಗೆ ಕಡೆಗೆ ಸಿಗುವುದೇ ಅಶಾಂತಿ, ಅತೃಪ್ತಿ, ಮಾನಸಿಕ ಹಿಂಸೆ ಎಂಬುದು ಎ. ಪಂಕಜ ಅವರ 'ಬಯಕೆಯ ಬೆಂಕಿ'ಯಲ್ಲಿ ಅಭಿವ್ಯಕ್ತಿಗೊಂಡಿದೆ. ಯಾರೇ ಆದರೂ ವೈಯಕ್ತಿಕ ಹಾಗೂ ಸಾಮಾಜಿಕ ಬದುಕನ್ನ ತನ್ನ ವ್ಯಾಪ್ತಿಯಲ್ಲಿಯೇ ಕಟ್ಟಿಕೊಳ್ಳಬೇಕು. ಅಳತೆ ಮೀರಿದ ಬಯಕೆ ಅವರ ಬದುಕನ್ನ ಅರ್ಧದಲ್ಲಿಯೇ ಅಂತ್ಯಗೊಳಿಸುತ್ತದೆಂಬ ಸಂದೇಶವಿದೆ. ಅಂತ್ಯದಲ್ಲಷ್ಟೇ ಅಲ್ಲದೇ ಬದುಕಿನುದ್ದಕ್ಕೂ ದೈಹಿಕವಾಗಿ, ಮಾನಸಿಕವಾಗಿ ಬಳಲಬೇಕಾಗುತ್ತದೆ. ಕಾದಂಬರಿಯ ನಾಯಕನಾದ ರಂಗನಾಥನ ಬಯಕೆಗಳೆಲ್ಲವೂ ಬೆಂಕಿಗಳೇ ಆಗಿವೆ. ತಂಗಿಯ ನಾದಿನಿಯನ್ನ ಮದುವೆಯಾಗಲು ಒಪ್ಪಿ ಬೇಜವಾಬ್ದಾರಿಯಾಗಿ ವರ್ತಿಸಿದ್ದರ ಪರಿಣಾಮ ಆಕೆ ರಂಗನಾಥನ ತಮ್ಮನನ್ನು ಮದುವೆಯಾದಳು. ಆಕೆಯ ಸೇಡಿನಿಂದಾಗಿ ಬಾಲ್ಯದ ಗೆಳತಿಯನ್ನು ಮದುವೆಯಾಗಿ ನೆಮ್ಮದಿ ಕಾಣಲಿಲ್ಲ. ಅಲ್ಲದೇ ಇವನ ಬದುಕನ್ನು ಹಸನು ಮಾಡಲು ಬಂದ ನಿರ್ಮಲ ಕೂಡ ಅಪಮಾನಿತಳಾಗಿ ಈತನನ್ನು ತೊರೆಯುತ್ತಾಳೆ. ಬಾಡಿಗೆ ಮನೆಯ ಮಾಲೀಕಳ ಮಗಳು ವಲ್ಲಿಯನ್ನ ಪ್ರೀತಿಸಿದ ಆದರೆ ಆಕೆಯ ಬದುಕು ನಿಕೃಷ್ಟವಾಗಿ ಅಂತ್ಯವಾಗುತ್ತದೆ. ಎಲ್ಲಾ ಬಯಕೆ ಮತ್ತು ಪ್ರಭಾವಗಳಿಂದ ಬೇಸತ್ತ ರಂಗನಾಥ ಕಡೆಗೆ ತಾನೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಮಾನವನ ಬಯಕೆಯ ಕೊಂಡಕ್ಕೆ ತುಪ್ಪ ಸುರಿಯುವ ಸಮಾಜ ಅವರ ಬದುಕಿನ ಅಂತ್ಯದೆಡೆಗೆ ಮಾರ್ಗದರ್ಶಿಯಾಗುತ್ತದೆಂಬ ಸೂಕ್ಷ್ಮತೆಯಿದೆ. ಈ ಕಾದಂಬರಿಯು ಇಂದಿನ ಯುವಜನತೆಯ ನೈಜ ಬದುಕಿನ ಪ್ರತಿಬಿಂಬದಂತಿದೆ.

ಆಧುನಿಕ ಜೀವನಶೈಲಿಗೆ ಕೇವಲ ಪುರುಷ ತರುವ ಸಂಪಾದನೆ ಯಾವುದಕ್ಕೂ ಸಾಲದೆಂಬ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ತಾಯಿಯಾಗಿ ತಂಗಿಯಾಗಿ ಗೃಹಿಣಿಯಾಗಿ ಇರಬೇಕಾದ ಹೆಣ್ಣು ಸಮಾಜಕ್ಕೆ ಒಗ್ಗಿಕೊಂಡು ದುಡಿಯಲೆತ್ನಿಸಿ ವ್ಯವಸ್ಥಿತ ಸಮಾಜದ ಯಜ್ಞವೇದಿಕೆಗೆ ಬಲಿಯಾದ ಕಥೆ 'ಬಲಿಪಶು' ಕಾದಂಬರಿಯಲ್ಲಿದೆ.

ಕಥಾನಾಯಕಿಯಾದ ಮಂಜುಳಾ ಪುರುಷ ನಿರ್ಮಿತ ಸಮಾಜದಲ್ಲಿ ತನ್ನದಲ್ಲದ ತಪ್ಪಿಗೆ ಪಶ್ಚಾತ್ತಾಪದ ತಪ್ಪೊಪ್ಪಿಗೆ ನೀಡಬೇಕಾಗುತ್ತದೆ. ಗಂಡ, ಮನೆ, ಮಕ್ಕಳು, ಉದ್ಯೋಗ, ಸಮಾಜ ಎಲ್ಲವನ್ನೂ ಸಂಭಾಳಿಸಿಕೊಂಡು ನಿರ್ವಹಿಸಲೆತ್ನಿಸುವ ಮಂಜುಳಾ ಪುರುಷನ ವಿಷಯಾಸಕ್ತಿಗೆ ಗುರಿಯಾಗುತ್ತಾಳೆ. ಇದು ಕೇವಲ ಒಂದು ವರ್ಗದ, ಜನಾಂಗದ, ಕಾಲಮಾನದ ಕಥೆಯಲ್ಲ ಜಗತ್ತಿನ ಪ್ರತಿಯೊಂದು ಕುಟುಂಬದಲ್ಲೂ ಮಂಜುಳೆಯಂಥ ಮಹಿಳೆ ಇರುವುದು ಸಹಜವಾದುದಾಗಿದೆ. ಸಮಾಜದ ವಿವಿಧ ಸ್ತರಗಳಲ್ಲಿ ಹೆಣ್ಣಿನ ತ್ಯಾಗದ ಬದುಕನ್ನ ಯಾವ ರೀತಿಯಲ್ಲಿ ಹಿಂಸಿಸಲಾಗುತ್ತಿದೆ ಎಂಬ ವಿಷಯ ಈ ಕಾದಂಬರಿಯಲ್ಲಿ ಬಹಳ ಮನೋಜ್ಞವಾಗಿ ಚಿತ್ರಿಸಲ್ಪಟ್ಟಿದೆ.

"ಮಹಿಳೆಯರು ಮಕ್ಕಳನ್ನು ಹೆರುತ್ತಾರೆ ಮತ್ತು ಅವರಿಗೆ ಮೊಲೆಯುಣಿಸುತ್ತಾರೆ. ಇವು ಮಹಿಳೆಯರಿಗೆ ವಿಶಿಷ್ಟವಾದ ಸಂಗತಿಗಳು. ಇವು ಪುರುಷರು ಮತ್ತು ಮಹಿಳೆಯರ ನಡುವಿನ ಜೈವಿಕ ಭಿನ್ನತೆ".೩ ಈ ಜೈವಿಕ ಭಿನ್ನತೆಯನ್ನು ಹೊರತುಪಡಿಸಿಯೂ ಮಹಿಳೆ ಭಿನ್ನವಾಗಿ ತನ್ನ ಸಮಾಜದಿಂದಲೇ ನಗಣ್ಯಳಾಗಿದ್ದಾಳೆ. ಎ. ಪಂಕಜ ಅವರ ಬಹಳಷ್ಟು ಕಾದಂಬರಿಗಳು ಸ್ತ್ರೀ ಕೇಂದ್ರಿತವೇ. ಆದರೆ ಕಷ್ಟ ನೋವುಗಳೆಲ್ಲವೂ ಹೆಣ್ಣಿಗೆ ಮಾತ್ರ ಎದುರಾಗುತ್ತದೆಂಬುದು ಇವರ 'ಮಾನಸ' ಕಾದಂಬರಿಯ ಅಭಿಮತ. ಭಾರತೀಯ ಸಂಸ್ಕೃತಿಯಲ್ಲಿ ಆಚರಣೆಯಲ್ಲಿದ್ದ ಬಾಲ್ಯವಿವಾಹದ ಆಗುಹೋಗುಗಳ ಆಚೆಈಚೆ ಕಾದಂಬರಿ ಸುಳಿದಾಡಿದೆ. ಬಾಲ್ಯ ವಿವಾಹಕ್ಕೊಳಗಾದ ಹೆಣ್ಣು ತನ್ನದಲ್ಲದ ತಪ್ಪಿಗೆ ಪ್ರಕೃತಿ ಸಹಜ ಬದಲಾವಣೆಗಳಿಗೆ ಬವಣೆಪಟ್ಟ ಬದುಕು ಇದರ ಪ್ರಧಾನ ಉದ್ದೇಶ. ಮಾನವ ಅದರಲ್ಲೂ ಹೆಣ್ಣು ತಾನು ಬದುಕಿನ ಕೆಲವೊಂದು ಸಂದರ್ಭಗಳಲ್ಲಿ ತೆಗೆದುಕೊಳ್ಳಬೇಕಾದ ನಿರ್ಧಾರಗಳು, ಅನುಸರಿಸಬೇಕಾದ ಮಾರ್ಗಗಳು ಬಹಳ ಮುಖ್ಯವಾಗುತ್ತದೆ. ಜೀವನದಲ್ಲಿ ಹಾಕಿದ ಮೊದಲ ತಪ್ಪು ಹೆಜ್ಜೆ ಇನ್ನುಳಿದ ಎಲ್ಲಾ ಹೆಜ್ಜೆಗಳ ತಪ್ಪಿಗೂ ಮೂಲವಾಗುತ್ತದೆಂಬ ಮಾರ್ಮಿಕತೆ ಅಡಗಿದೆ.

ನ್ಯಾಯ ನೀತಿ ಧರ್ಮ ಸತ್ಯ ಪ್ರಾಮಾಣಿಕತೆ ಪ್ರಬುದ್ಧತೆಯುಳ್ಳ 'ಪ್ರೇಮಸಂಗಮ' ಕಾದಂಬರಿಯ ನಾಯಕ ಬದುಕಿನುದ್ದಕ್ಕೂ ಬವಣೆಗೊಳಗಾಗುತ್ತಾನೆ. ಸಮಸಮಾಜದ ಪರಿಸರ ಅದೆಷ್ಟು ಮಟ್ಟಿಗೆ ಪ್ರಭಾವಿಸಬಲ್ಲದೆಂಬುಕ್ಕೆ ಇದೊಂದು ಉತ್ತಮ ಉದಾಹರಣೆ. ಎ. ಪಂಕಜ ಅವರ ಬರಹಗಳು ಶೋಷಿತರ ನೆಲೆಯಲ್ಲಿಯೇ ನಿಂತು ಬರೆದರೂ ಆ ಶೋಷಕರನ್ನು ಪ್ರತಿರೋಧಿಸುವ ಪರಿಣಾಮಕಾರಿ ಸನ್ನಿವೇಶ ಚಿತ್ರಿಸಲಿಲ್ಲ. ಇವರ ಸಾಮಾಜಿಕ ಪ್ರಜ್ಞೆ ನೈಜ ಬದುಕಿಗೆ ಹತ್ತಿರವಾಗಿದ್ದು ಸಮಕಾಲೀನರಿಗೆ ಸಮಸಮಾಜದ ವೈರುಧ್ಯಗಳ ಬಗೆಗೆ ಅರಿವು ಮೂಡಿಸುವ ಪ್ರಯತ್ನವನ್ನಷ್ಟೇ ಮಾಡಿವೆ. ನಾಯಕ ಆನಂದನೊಟ್ಟಿಗೆ ಬೆಳೆದ ಮೀರಾಳ ಬದಲಿಗೆ ವೀಣಾ ಹಸೆಮಣೆ ಏರುತ್ತಾಳೆ.

ಇಂದಿನ ಪ್ರೇಮಿಗಳಂತೆ ಮೀರಾ ಅನಾಹುತದೆಡೆಗೆ ಮುಖ ಮಾಡದೇ, ಆತನಿಲ್ಲದಿದ್ದರೂ ಆತ್ಮಸ್ಥೈರ್ಯದಿಂದ ಬದುಕು ಕಟ್ಟಿಕೊಳ್ಳುತ್ತಾಳೆ. ಆದರೆ ವೀಣಾಳ ಅಸಂಬದ್ಧ ನಡೆ ಹಾಗೂ ಆಕೆಯ ಅನಿರೀಕ್ಷಿತ ಸಾವು ಆನಂದನ ಅತೃಪ್ತ ಜೀವನಕ್ಕೆ ಮತ್ತೆ ಪ್ರೇಮಸುಧೆ ಸಿಂಪಡಿಸುತ್ತದೆ. ಯಾರ ಮನದಲ್ಲೂ ಸ್ವಾರ್ಥಲಾಲಸೆ ಕಾಣಲೇ ಇಲ್ಲ. ಹಣೆಯಲ್ಲಿ ಬರೆದದ್ದು ನಡೆಯಿತೆಂದಷ್ಟೇ ಭಾವಿಸಿಕೊಳ್ಳಬೇಕು. ಸದ್ಗುಣಿಯೋರ್ವ ತನ್ನ ತಾಳ್ಮೆ ಹಾಗೂ ಸಂಯಮದಿಂದ ಹೆಸರು, ಕೀರ್ತಿ, ಅಂತಸ್ತು, ಬಯಸಿದ ಬದುಕು ಎಲ್ಲವನ್ನೂ ಪಡೆದು ತೃಪ್ತ ಜೀವನ ಪಡೆಯಬಹುದೆಂಬ ಜಾಗತಿಕ ಸೌಹಾರ್ದ ಪ್ರಜ್ಞೆ ಇವರ ಬರಹಗಳಲ್ಲಿರುವುದು ಪ್ರಶಂಸನೀಯ.

ಯಾವುದೇ ಸಾಹಿತ್ಯ ಕೃತಿಯಾದರೂ ಕೂಡ ಅದು ಸೃಷ್ಟಿಯಾಗುವುದು ಸನ್ನಿವೇಶ ಸಂದರ್ಭ ಒದಗಿ ಬಂದಾಗ ಇಲ್ಲವೇ ಅನುಭವವಾದಾಗ. ಕಲ್ಪಿತ ಸನ್ನಿವೇಶಗಳು ಸೇರಬಹುದಾದರೂ ನೈಜ ಬದುಕಿಗೆ ಹತ್ತಿರವಾಗಿದ್ದು ಸಹೃದಯರ ಸ್ಪಂದನೆಯಿದ್ದರೆ ಅದು ಪ್ರಭಾವಶಾಲಿಯಾಗಿರುತ್ತದೆ. ಎ.ಪಿ. ಮಾಲತಿಯವರ ಕಾದಂಬರಿಗಳೆಲ್ಲವೂ ಸಾಮಾಜಿಕ ಪ್ರಜ್ಞೆಯುಳ್ಳವಾಗಿದ್ದು ಅನಿಶ್ಚಿತ ಮನದ ತಲ್ಲಣ, ಗ್ರಾಮೀಣ ಬದುಕಿನ ಆಧುನಿಕ ಸ್ಥಿತ್ಯಂತರಗಳು, ಪರಿಣಾಮ, ಆಯ್ಕೆ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಿಕೆ, ಪುರುಷ ನಿರ್ಮಿತ ಸಮಾಜದಲ್ಲಿ ಸ್ತ್ರೀ ಸ್ಥಾನಮಾನ, ಲೋಕೋಭಿನ್ನರುಚಿಯ ತಾಕಲಾಟಗಳು, ಸ್ತ್ರೀ ಸಂವೇದನೆ ಇನ್ನಿತರೆ ಸಾಮಾಜಿಕ ಮೌಲ್ಯಗಳೇ ಇವರ ಕಾದಂಬರಿಗಳಲ್ಲಿ ಪ್ರಾಧಾನ್ಯತೆ. ಷರತ್ತುಬದ್ಧ ಬರಹಗಳು ಮುಕ್ತತೆಯಿಂದ ವಂಚಿತವಾಗಿರುತ್ತವೆ. ಅವುಗಳನ್ನು ನೈಜತೆಗಿಂತ ಕಲ್ಪನೆ, ಅವಾಸ್ತವಿಕತೆ ಹೆಚ್ಚು ಪ್ರಭಾವಿಸುತ್ತದೆ.

ಅಲೆಮಾರಿಯಾಗಿ ಅಲೆಯುತ್ತಿದ್ದ ಮನುಷ್ಯ ಒಂದೆಡೆ ನೆಲೆನಿಂತಾಗಿನಿಂದಲೇ 'ಕೃಷಿ'ಯ ಅಸ್ಮಿತೆಯನ್ನು ಅರಿಯಬಹುದು. ಅದು ಬದುಕಿನ ಉಪಕ್ರಮವೂ ಆಯಿತು. ಕೃತಿಯ ಮೂಲದ್ರವ್ಯ ಸಮಾಜವೇ ಆಗಿರುವುದರಿಂದ ಸಮಾಜದ ಒಂದು ಭಾಗವಾದ ಕೃಷಿಯೂ ಸಾಹಿತ್ಯ ಕೃತಿಗಳ ಪ್ರಮುಖ ಪರಿಕಲ್ಪನೆಯಾಗಿ ಬಳಕೆಗೊಂಡಿತು. ಪ್ರಾಚೀನದಿಂದಲೂ ಇಂದಿನ ಆಧುನಿಕ ಸಾಹಿತ್ಯದವರೆಗೂ ಕನ್ನಡದ ಹಲವು ಕಾದಂಬರಿಗಳು ಗ್ರಾಮೀಣ ಪ್ರದೇಶದಲ್ಲೇ ರಚನೆಗೊಂಡು ಕೆಲವೊಮ್ಮೆ ಕುಟುಂಬದ ಸದಸ್ಯರಲ್ಲಿ ವಿರಸ ಉಂಟಾಗಿ ನಗರದತ್ತ ಸಾಗುತ್ತವೆ. ಇಂಥದ್ದೊಂದು ಸಂದಿಗ್ಧ ಪರಿಸ್ಥಿತಿ 'ಹಸಿರು ಚಿಗುರು' ಕಾದಂಬರಿಯಲ್ಲಿದೆ. ೨೦-೨೧ ನೇ ಶತಮಾನ ಮಾಹಿತಿ ತಂತ್ರಜ್ಞಾನದ ಯುಗ. ಇಂದಿನ ಪೀಳಿಗೆಯಂತೂ ಆಧುನಿಕತೆಯೆಡೆಗೆ ಮುಖ ಮಾಡಿರುವುದು ಸರ್ವೇ ಸಾಮಾನ್ಯವಾಗಿದೆ. ಮಧ್ಯಮ ವರ್ಗದವರ ಸಾಂಸಾರಿಕ ಬದುಕು ಕಾದಂಬರಿಯ ಕೇಂದ್ರವಸ್ತುವಾಗಿದೆ. "ಜಗತ್ತಿನ

ಯಾವುದೇ ಧರ್ಮದಲ್ಲಿಯೂ ಹೆಣ್ಣಿಗೆ ಪುರುಷನಷ್ಟು ಸ್ವಾತಂತ್ರ್ಯ - ಸ್ವಾವಲಂಬನೆಯನ್ನು ನೀಡಿಲ್ಲ. ಸಾಮಾಜಿಕ, ರಾಜಕೀಯ, ಧಾರ್ಮಿಕ ಯಾವುದೇ ಕ್ಷೇತ್ರವಿರಲಿ ಕೇವಲ ಬೆರಳೆಣಿಕೆಯ ಮಹಿಳೆಯರು ಮಾತ್ರ ಸಾಧನೆ ಮಾಡಿದ್ದು "ಉಳಿದವರು ಅದೆಷ್ಟೇ ಪ್ರತಿಭಾವಂತರಿರಲಿ ಅವಕಾಶ ವಂಚಿತಳಾಗಿದ್ದಾಳೆ".೪ ಶಾಲೆಯಲ್ಲಿ ಪಾಠ ಮಾಡುವ ಕೆಲಸಕ್ಕೆ ಹೋಗಬೇಕೆಂಬ ಹೆಣ್ಣಿನ ಆಸೆಗೆ ಪುರುಷ ಪ್ರಧಾನಿತ ಸಮಾಜ ಪ್ರತಿಷ್ಠೆಯ ನೆಪವೊಡ್ಡಿ ಆಕೆಯನ್ನು ಮನೆಯಲ್ಲೇ ಉಳಿಯುವಂತೆ ಮಾಡುತ್ತದೆ. ನಗರೀಕೃತ ಬದುಕನ್ನ ಬಯಸಿದ ಆಕೆ ಮನೆಯಲ್ಲಿ ಇರದೇ ಮತ್ತೇ ಕೆಲಸ ಮಾಡಲಿಚ್ಛಿಸುತ್ತಾಳೆ. ಮನೆತನದ ಗೌರವಕ್ಕಾಗಿ ಮಿಡಿಯುವ ಗೋಪಾಲರಾಯರು ಅದಕ್ಕೆ ಅವಕಾಶ ನೀಡುವುದೇ ಇಲ್ಲ. ಸಾಂಪ್ರದಾಯಿಕ ಹಾಗೂ ಆಧುನಿಕ ದಿನಗಳಿಗಾಗಿ ಎರಡು ತಲೆಮಾರುಗಳ ನಡುವಿನ ಘರ್ಷಣೆ ಇಂದಿನ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ದಿನನಿತ್ಯ ಕಾಣಬಹುದಾಗಿದೆ. ಆದರೆ ಕಾದಂಬರಿ ಕೇಂದ್ರ-ಪೋಷಕ ಪಾತ್ರವಾದ ಗೋಪಾಲರಾಯರು ತಮ್ಮದೇ ಆದ ಮಣ್ಣಿನಾಸೆ, ಹಳೇ ಬೇರಿನಾಸೆಯನ್ನು ಚಿಗುರಿಸಿ ಮತ್ತದೇ ಹಿಂದಿನ ಹಸಿರಿನಿಂದ ಕಂಗೊಳಿಸುವ ದಿನಗಳನ್ನ ಮರುಕಳಿಸಲೆತ್ನಿಸುತ್ತಾನೆ. ನಗರಕ್ಕೆ ಬಂದ ಮೇಲೂ ಆ ಬಗೆಗೇ ಚಿಂತಿಸುವ ಗೋಪಾಲರಾಯರ ಮೊಮ್ಮಗ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿ ಕೃಷಿ ಬದುಕಿನೆಡೆಗೆ ಮುಖಮಾಡಿ ಹಳೇ ಸಂಸ್ಕೃತಿಯನ್ನು ನೆಚ್ಚಿಕೊಳ್ಳುತ್ತಾನೆ. ವೃದ್ಧಾಪ್ಯದ ಕನಸನ್ನ ನನಸಾಗಿಸಲು ತಾತನ ಆಸೆಗೆ ಒತ್ತಾಸೆಯಾಗಿ ನಿಲ್ಲುವ ಮೊಮ್ಮಗ ಶಶಾಂಕ ತನ್ನ ತಾತನ ಊರಿನಲ್ಲಿ ಹಳ್ಳಿಗೆ ಹೋಗಿ ಕೃಷಿ ಜೀವನ ನಡೆಸಲು ಬಯಸುತ್ತಾನೆ. ಕರುಳಿಗಾಗಿ ಮಿಡಿಯುವ ತಾಯ್ತಂದೆಯರು ಮಗನ ನಡೆಗೆ ಹೆಜ್ಜೆಗೂಡಿಸುತ್ತಾರೆ. ಬದಲಾಗುವುದು ಅನಿವಾರ್ಯವಾಗುತ್ತದೆ.

"ಹೆಣ್ಣಿಗೆ ವಿವಾಹವೇ ಅಂತಿಮವಲ್ಲ; ಅದನ್ನು ಮೀರಿಯೂ ಆಕೆ ತನ್ನತನವನ್ನು ಬೆಳಿಸಿಕೊಳ್ಳಬಲ್ಲಳು; ಸಮಾಜವನ್ನು ಸಶಕ್ತಗೊಳಿಸಲು ಮಹತ್ವದ ಕೊಡುಗೆಯನ್ನು ನೀಡಬಲ್ಲಳು ಎಂಬುದನ್ನು ಖಾಲಿಮನೆಯ ಕುಮುದಾಳ ಪಾತ್ರದಲ್ಲಿ ಎ.ಪಿ. ಮಾಲತಿಯವರು ಕಡೆದಿಟ್ಟಿದ್ದಾರೆ".೫ ಪರಿವರ್ತನೆಗಾಗಿ ತುಡಿಯುತ್ತಿದ್ದ ಆ ವೇಳೆಯಲ್ಲಿ ವ್ಯವಸ್ಥಿತ ಸಮಾಜಕ್ಕೆ ಕಟ್ಟುಬೀಳದೇ ಮನಸ್ಸು ಬಯಸಿದ ನೆಮ್ಮದಿಯನ್ನ ಪರ್ಯಾಯ ಕಾರ್ಯಕೈಗೊಳ್ಳುವ ಮುಖೇನ 'ಖಾಲಿಮನೆ' ಕಾದಂಬರಿಯ ನಾಯಕಿ ಕುಮುದಾ ತನ್ನ ಬದುಕನ್ನ ಸಾರ್ಥಕಪಡಿಸಿಕೊಳ್ಳುವಳು. ತನ್ನ ಪ್ರೀತಿಯೇ ಮುಖ್ಯವೆಂದು ಭಾವಿಸಿದ ಕುಮುದಾ ಎರಡನೇ ಹೆಂಡತಿಯಾಗಲು ಒಪ್ಪುತ್ತಾಳೆ. ಆದರೆ ಹಿರಿಯ ನಾಯಕ ಬಾಪು ಒಪ್ಪುವುದಿಲ್ಲ. ಆಧುನಿಕ ಯುವಜನತೆಯಂತೆ ಬದುಕನ್ನ ದುರಂತಕ್ಕೀಡಾಗಿಸಿಕೊಳ್ಳದೇ ತನ್ನ ಪ್ರೀತಿಯನ್ನ, ಅನಾಥ ಅಶಕ್ತರ ಪಾಲನೆ ಪೋಷಣೆಯಲ್ಲಿ ಕಾಣುತ್ತಾಳೆ. ಆಧುನಿಕ ಜೀವನಶೈಲಿಗೆ ಮಾರುಹೋಗದ ಕುಮುದಾ ಪರೋಪಕಾರಿ

ಜೀವನ ನಡೆಸುತ್ತಾಳೆ. ಆ ಮುಖಾಂತರ ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಮಾದರಿ ವ್ಯಕ್ತಿತ್ವದವಳಾಗುತ್ತಾಳೆ. ಕಾಲಾಂತರದಲ್ಲಿ ತನ್ನ ಪ್ರೀತಿ ಲಭಿಸುತ್ತದಾದರೂ ಆಕೆಯ ದಿಟ್ಟ ನಿರ್ಧಾರ ಆಕೆಯನ್ನು ಆದರ್ಶನೀಯಳಾಗಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆ ದ್ವಿತೀಯ ದರ್ಜೆಯವಳಾಗಿಯೇ ಬಿಂಬಿಸಲ್ಪಟ್ಟವಳು. ಯಾವುದೇ ತೀರ್ಮಾನ, ನಿರ್ಧಾರ, ಅಭಿಪ್ರಾಯಗಳಲ್ಲಿ ಸ್ತ್ರೀ ಪುರುಷನ ನಂತರದವಳೆ..! ಪುರುಷ ಪ್ರತಿಷ್ಠೆಯನ್ನು ಒಪ್ಪಿಕೊಳ್ಳಬೇಕಾದ, ರಕ್ಷಿಸಬೇಕಾದ, ಅನಿವಾರ್ಯತೆ ಹೆಣ್ಣಿಗಿತ್ತು. "ಪುರುಷ ಪ್ರಧಾನ್ಯದ ಸ್ವರೂಪ ಒಂದು ಸಮಾಜದಿಂದ ಇನ್ನೊಂದು ಸಮಾಜದಲ್ಲಿ ಭಿನ್ನವಾಗಿರಬಹುದು. ಆದರೆ ಯಾವುದೇ ಸಮಾಜಕ್ಕೆ ಈ ಪುರುಷ ಕೇಂದ್ರಿತ ಆರ್ಥಿಕ, ರಾಜಕೀಯ ಅಥವಾ ಸಾಮಾಜಿಕ ವ್ಯವಸ್ಥೆಯಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯವಾಗಿಲ್ಲ".೬ ಆದರೆ ಎ.ಪಿ. ಮಾಲತಿ ಅವರ 'ನೂಪುರಗಾನ' ಕಾದಂಬರಿಯ ನಾಯಕಿ ಗಾಯಿತ್ರಿಯಲ್ಲಿ ಪುರುಷ ನಿರ್ಮಿತ ಸಮಾಜವನ್ನ ಧಿಕ್ಕರಿಸಿ ನಡೆಯುವ ಸನ್ನಿವೇಶವನ್ನ ಕಾಣಬಹುದು. ಆಕೆಯ ಪ್ರತಿರೋಧ ಯಾವುದೋ ಒಂದು ಕಾಣದ ಪರಿವರ್ತನೆಗಾಗಿ ಅಲ್ಲ. ತನ್ನೊಳಗಿನ ಪ್ರತಿಭೆಯ ಅಂತಃಸತ್ವವನ್ನ ಅನಾವರಣಗೊಳಿಸಲು ಸಂಗೀತ-ನೃತ್ಯದ ಬಗೆಗೆ ಇದ್ದ ತನ್ನ ವಿಶಿಷ್ಟ ಆಸೆಯನ್ನ ಸಾಕಾರಗೊಳಿಸಲು ಆ ನಿಟ್ಟಿನಲ್ಲಿ ಆಕೆ ಯಶಸ್ವಿಯೂ ಆಗುತ್ತಾಳೆ. ಅಂದಿನ ಇಂದಿನ ಯುವ ಪ್ರತಿಭೆಗಳಿಗೆ ಸ್ಪೂರ್ತಿಯ ಚಿಲುಮೆಯಾಗುತ್ತಾಳೆ. ಪುರುಷನ ಆಶ್ರಯವಿಲ್ಲದೇ ಸ್ತ್ರೀ ಸ್ವತಂತ್ರವಾಗಿ ಜೀವನ ನಡೆಸಬಹುದೆಂಬ ಆತ್ಮಸ್ಥೈರ್ಯಕ್ಕೆ ಸಾಕ್ಷಿಯಾಗುತ್ತಾಳೆ. ಕಡೆಗೆ ತಾಯಿ-ತಂದೆ ಎಂಬ ವಾತ್ಸಲ್ಯ ಮಕ್ಕಳಿಗಾಗಿ ಒಂದಾಗುವುದು ಕಾದಂಬರಿಯ ಸುಖಾಂತ್ಯಕ್ಕೆ ಹುಡುಕಿದ ಉಪಾಯವೆನಿಸುತ್ತದೆ. ಆ ಮುಖೇನ ಹೆಣ್ಣಿನ ಸಾಮರ್ಥ್ಯ, ಛಲ, ಸ್ವಾಭಿಮಾನವನ್ನ ಈ ವ್ಯವಸ್ಥಿತ ಸಮಾಜಕ್ಕೆ ಪರಿಚಯಿಸಿದ್ದಾರೆ.

ಸಾಹಿತ್ಯವು ಮನುಷ್ಯ ಕಂಡುಕೊಂಡ ಅಶಾಬ್ದಿಕ ಅಭಿವ್ಯಕ್ತಿ ಮಾಧ್ಯಮವಾಗಿದೆ. ತಾನು ಹೇಳಬೇಕೆನಿಸಿದ್ದನ್ನು, ಹೇಳಬೇಕಾದ್ದನ್ನು ಹೇಳಲು ಪ್ರಶಸ್ತವಾದುದಾಗಿದೆ. ಹಗಲಿನ ವೇಳೆಯಲ್ಲಿ ಕುಟುಂಬದ ಸದಸ್ಯರ ಜೊತೆ ವ್ಯವಸಾಯದಲ್ಲಿ, ಇರುಳಲ್ಲಿ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದ ಎ.ಪಿ. ಮಾಲತಿಯವರ ಬರಹಗಳು ವೈಶಿಷ್ಟ್ಯಪೂರ್ಣವಾಗಿವೆ. "ನಮ್ಮ ಖುಷಿಗಾಗಿ ಸಾಹಿತ್ಯ ರಚನೆ ಮಾಡುತ್ತಿದ್ದರೂ ರಚಿಸುವ ಕೃತಿ, ಓದುಗರಿಗೆ ಹತ್ತಿರವಾದರೆ, ಸಹೃದಯರ ಸ್ಪಂದನವಿದ್ದರೆ ಅಂತಹ ಕೃತಿ ಹೆಚ್ಚು ಪರಿಣಾಮಕಾರಿ"೭ ಎಂದು ಭಾವಿಸಿದ್ದ ಎ.ಪಿ. ಮಾಲತಿಯವರು ಕೃಷಿ ಮತ್ತು ಸಾಹಿತ್ಯ ಕೃಷಿಯಲ್ಲಿ ಮನಃಪೂರ್ವಕವಾಗಿ ತೊಡಗಿಸಿಕೊಂಡಿದ್ದರು. ಸಮಾಜದ

ವೈವಿಧ್ಯಮಯ ಸಾಂಸ್ಕೃತಿಕ ಮೌಲ್ಯಗಳನ್ನೆ ತಮ್ಮ ಅವಿಭಾಜ್ಯ ಅಂಗವಾಗಿಸಿಕೊಂಡಿರುವ ಇವರ ಕಾದಂಬರಿಗಳಲ್ಲಿ ರೌದ್ರ ಭೀಭತ್ಸದ ಸನ್ನಿವೇಶಗಳು ಲವಲೇಶವೂ ಕಾಣಸಿಗುವುದಿಲ್ಲ. 'ತಿರುಗಿದ ಚಕ್ರ' ಕಾದಂಬರಿಯ ಹಿರಿಯ ನಾಯಕಿ ಭಾಗೀರಥಿಯಲ್ಲಿ ಏಕಮುಖ ಚಿಂತನೆಯಿಂದ ಕೂಡಿದ ನಾನತ್ವದ ಅಹಂಮಿಕೆ, ಇದರಿಂದ ಆಕೆ ಅನುಭವಿಸುವ ಅನಾಥಭಾವ, ಗಂಡ ಮಂಜುನಾಥಯ್ಯನ ಕರುಣೆ, ಪ್ರೀತಿ ಮಮಕಾರ, ಪರರ ಕಷ್ಟಕ್ಕೆ ಸ್ಪಂದಿಸುವ ಗುಣ, ತನ್ನ ಮಕ್ಕಳ ಬಗೆಗಿನ ವಾತ್ಸಲ್ಯ, ಇನ್ನಿತರೆ ಪಾತ್ರಗಳಲ್ಲಿ ಕಾಣಬಹುದಾದ ಪರಸ್ಪರ ಸಹಕಾರ ತತ್ವ ಇತ್ಯಾದಿ ಗುಣ ಸುಗುಣಗಳೆಲ್ಲವೂ ಸಮ್ಮಿಳಿತಗೊಂಡಿವೆ. ಕುಟುಂಬವು ಒಂದು ಪುಟ್ಟ ಸಮಾಜವಾಗಿರುವುದರಿಂದ ಕುಟುಂಬವನ್ನು ಸಾಕ್ಷೀಕರಿಸಿಕೊಂಡು ಸಮಸಮಾಜವನ್ನು ಬಿಂಬಿಸುವ ಸಾಕಷ್ಟು ಪ್ರಯತ್ನ ನಡೆದಿದೆ. ನಾನತ್ವವನ್ನ ಬೆಳೆಸಿಕೊಂಡು ವ್ಯಕ್ತಿತ್ವವನ್ನು ಹಾಳುಗೆಡವಿಕೊಂಡರೆ ಆಗುವ ಪರಿಣಾಮವನ್ನ ಸಮಾಜಕ್ಕೆ ಸಾರುವುದು ಕಾದಂಬರಿಯ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

ಸಮಾಜದ ಇಲ್ಲವೇ ಸಾಹಿತ್ಯದ ಎರಡು ಮಗ್ಗಲುಗಳೂ ಸೋಲು ಗೆಲುವು, ನೋವು ನಲಿವು, ಸುಖದುಃಖಗಳ ಮಿಶ್ರಣವಾಗಿರುತ್ತವೆ. ಅಂತೆಯೇ ಸಮಾಜ ಮತ್ತು ಸಾಹಿತ್ಯಗಳೆರಡೂ ಒಂದೇ ನಾಣ್ಯದ ಎರಡು ಮುಖಗಳೆಂದು ಗಣಿಸಲಾಗಿದೆ. ಸಮಾಜ ಬಿಂಬವಾದರೆ, ಸಾಹಿತ್ಯ ಅದರ ಪ್ರತಿಬಿಂಬ. ಸಾಹಿತಿಯು ಸಮಾಜದ ಕೂಸಾಗಿರುವುದರಿಂದ ಸಾಹಿತ್ಯದ ಬೇರು ಸಮಾಜದಲ್ಲಿಯೇ ಹುದುಗಿರುತ್ತದೆ. ೧೯-೨೦ನೇ ಶತಮಾನಗಳೆರಡೂ ಸಾಮಾಜಿಕವಾಗಿ ಹಾಗೂ ಸಾಹಿತ್ಯಿಕವಾಗಿ ಸಂಕ್ರಮಣ ಕಾಲ. ಭಾರತೀಯರ ಬದುಕು ಪಾಶ್ಚಾತ್ಯರಿಂದ ನಿಯಂತ್ರಿಸಲ್ಪಟ್ಟಿತ್ತು. ಸಾಹಿತ್ಯದಲ್ಲೂ ಕೂಡ ಇನ್ನೆಂದೂ ಕಾಣದ ಸಾಹಿತ್ಯಿಕ ಘಟ್ಟಗಳು ಕನ್ನಡ ಸಾಹಿತ್ಯ ವಲಯದಲ್ಲಿ ಸೃಷ್ಟಿಯಾದವು. ಪ್ರಕಾರಗಳೂ ಕೂಡ ವಿಭಾಗಿಸಲ್ಪಟ್ಟವು. ಆಧುನಿಕ ಯುಗದ ಮಾಹಿತಿ ತಂತ್ರಜ್ಞಾನದ ಮೂಲಕವೇ ಜಗತ್ತಿನ ಭಾಗಶಃ ಎಲ್ಲಾ ವ್ಯವಹಾರಗಳೂ ನಡೆಯುತ್ತಿರುವುದು ಸರ್ವಸಮ್ಮತ ವಿಚಾರ. "ಆಧುನಿಕ ಲೇಖಕರ ಬರವಣಿಗೆಗಳು ಬಂಡವಾಳಶಾಹಿ ಜಗತ್ತಿನ ಜೊತೆಗೆ ಒಪ್ಪಂದ ಮತ್ತು ವಿರೋಧ ಎರಡನ್ನೂ ಸ್ಥಾಪಿಸಿವೆ".೮ ಸಾಹಿತ್ಯವು ಸಾಮಾನ್ಯನ ಬರವಣಿಗೆಯೇ ಆಗಿರುವುದರಿಂದ ವಾಸ್ತವವೂ ಹೌದು. ವಿಶಾಲ ಅರ್ಥವ್ಯಾಪ್ತಿ ಹೊಂದಿದ ಸಾಹಿತ್ಯವೂ ಕೂಡ ಇದರಿಂದ ಹೊರತಾಗಿಲ್ಲ. ವಾಟ್ಸಾಪ್, ಫೇಸ್ಬುಕ್, ಯೂಟ್ಯೂಬ್‌ನಂಥಾ ಸಾಮಾಜಿಕ ಮಾಧ್ಯಮಗಳೂ ಸಹ ಸಾಹಿತ್ಯವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿಯೇ ಸಹಕಾರಿಯಾಗಿವೆ. ವಾಟ್ಸಾಪ್ ಸಾಹಿತ್ಯ ಪತ್ರಿಕೆಗಳು, ಫೇಸ್ಬುಕ್, ಯೂಟ್ಯೂಬ್‌ನಲ್ಲಿ ಕಥಾವಾಚನ ಇತ್ಯಾದಿ ಸಾಕಷ್ಟು ಸಾಹಿತ್ಯಿಕ ಬ್ಲಾಗ್‌ಗಳು ಕನ್ನಡವನ್ನೂ

ಒಳಗೊಂಡಂತೆ ಭಾರತೀಯ ಸಾಹಿತ್ಯವನ್ನು ವಿಶ್ವ ಸಾಹಿತ್ಯವಾಗಿಸುತ್ತಿವೆ. ಭಾರತದ ಪ್ರತಿಯೊಂದು ಭಾಷೆಯ ಎಲ್ಲಾ ಬಗೆಯ ಸಾಹಿತ್ಯವೂ ಕೂಡ ಪ್ರತ್ಯಕ್ಷವಾಗಿ, ಇಲ್ಲವೇ ಪರೋಕ್ಷವಾಗಿ ಮಾನವ ಬದುಕನ್ನು ಪ್ರಭಾವಿಸಿ ಭಾರತದ ಐಕ್ಯತೆಯನ್ನು ಸಾಧಿಸುವಲ್ಲಿ ಯಶಸ್ವಿಯಾಗಿವೆ.

**ಕೊನೆಟಿಪ್ಪಣಿಗಳು**

೧. ಜಿ.ಎಚ್. ನಾಯಕ್ ; ನಿಜದನಿ ; ಪುಟ ೨೦೬.

೨. ಎ.ಪಿ. ಮಾಲತಿ ; ಸ್ಮೃತಿಯಾನ ; ಪುಟ ೧೧೩, ೨೦೧೬.

೩. ಟಿ. ಆರ್. ಚಂದ್ರಶೇಖರ್; ಮಹಿಳಾ ಅಧ್ಯಯನ ಪರಿಭಾಷೆ; ಪುಟ ೩೭.

೪. ಪೂಜಾ ಬಂಕಲಗಿ; ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ; ಡಾ. ಅರುಣಕುಮಾರಿ ಬಿ.ಎನ್. (ಸಂ.), ಕನ್ನಡ ಮಹಿಳಾ ಸಾಹಿತ್ಯ ತಾತ್ವಿಕತೆ, ಪುಟ ೧೪೧, ೨೦೨೧.

೫. ಶೈಲಾ ಯು.; ಸಮನ್ವಯ ಸಾಹಿತ್ಯದ ಲೇಖಕಿ ಎ.ಪಿ. ಮಾಲತಿ; ಪುಟ ೩೩.

೬. ಆರ್.ಇಂದಿರಾ; ಸ್ತ್ರೀವಾದಿ ದಿಕ್ಸೂಚಿ, ಪುಟ ೧೫.

೭. ಎ.ಪಿ ಮಾಲತಿ; ಸ್ಮತಿಯಾನ; ಪುಟ ೧೧೬.

೮. ಡಾ.ಕೆ. ಕೇಶವ ಶರ್ಮ: ಕನ್ನಡ ಮಹಿಳಾ ಸಾಹಿತ್ಯ ಹೆಜ್ಜೆ-ಗುರುತುಗಳು; ಉಷಾ ಪಿ. ರೈ. ; ಲೇಖಕಿ ಪುಟ ೧೩೮.

**ಆಕರ ಗ್ರಂಥಗಳು**


೧. ಎ. ಪಂಕಜ : ಅವನೇ ಕಾರಣ ಓಂ ಶಕ್ತಿ ಪ್ರಕಾಶನ ಬೆಂಗಳೂರು, ೧೯೭೭.

೨. ಎ. ಪಂಕಜ : ಬಲಿಪಶು ಇಂದಿರಾ ಪ್ರಕಾಶನ ಬೆಂಗಳೂರು, ೧೯೮೨.

೩. ಎ. ಪಂಕಜ : ಮೋಹದ ಮಡಿಲಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಕಾಶನ ಬೆಂಗಳೂರು, ೧೯೮೪.

೪. ಎ. ಪಂಕಜ : ಬಯಕೆಯ ಬೆಂಕಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಕಾಶನ ಬೆಂಗಳೂರು, ೧೯೮೬.

೫. ಎ. ಪಂಕಜ : ಮಾನಸ ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಕಾಶನ ಬೆಂಗಳೂರು, ೧೯೮೬.

೬. ಎ.ಪಂಕಜ : ಪ್ರೇಮಸಂಗಮ ಇಂದಿರಾ ಪ್ರಕಾಶನ ಬೆಂಗಳೂರು, ೧೯೮೭.

೭. ಎ.ಪಿ. ಮಾಲತಿ : ತಿರುಗಿದ ಚಕ್ರ ಗೀತಾ ಬುಕ್ ಹೌಸ್ ಮೈಸೂರು, ೧೯೮೫.

೮. ಎ.ಪಿ. ಮಾಲತಿ : ಖಾಲಿಮನೆ ಗೀತಾ ಬುಕ್ ಹೌಸ್ ಮೈಸೂರು, ೧೯೯೯.

೯. ಎ.ಪಿ. ಮಾಲತಿ : ಹಸಿರು ಚಿಗುರು ಹೇಮಂತ ಸಾಹಿತ್ಯ ಪ್ರಕಾಶನ ಬೆಂಗಳೂರು, ೨೦೦೮.


**ಪರಾಮರ್ಶನ ಗ್ರಂಥಗಳು**


೧. ಅರುಣಕುಮಾರಿ ಬಿ.ಎನ್. : ಕನ್ನಡ ಮಹಿಳಾ ಸಾಹಿತ್ಯ : ತಾತ್ವಿಕತೆ

ಸುವ್ವಿ ಪಬ್ಲಿಕೇಶನ್ಸ್, ಶಿಕಾರಿಪುರ ಶಿವಮೊಗ್ಗ, ೨೦೨೧.

೨. ಇಂದಿರಾ ಆರ್. : ಸ್ತ್ರೀವಾದಿ ದಿಕ್ಸೂಚಿ ಸಮತಾ ಅಧ್ಯಯನ ಕೇಂದ್ರ, ಮೈಸೂರು ೧೯೯೫.

೩. ಚಂದ್ರಶೇಖರ್ ಟಿ.ಆರ್. : ಮಹಿಳಾ ಅಧ್ಯಯನ ಪರಿಭಾಷೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು, ೨೦೧೬

೪. ನಾಗಾರ್ಜುನ ಹಾ.ಮ. ಡಾ. : ಸ್ತ್ರೀ ವಾದಿ ಚಿಂತನೆಗಳು ಪ್ರೊ. ಕೇಶವಶರ್ಮ ಕೆ. ದೇಸಿ ಪುಸ್ತಕ ಬೆಂಗಳೂರು, ೨೦೧೦.

೫. ನಾಯಕ್ ಜಿ.ಎಚ್. : ನಿಜದನಿ ಅಭಿನವ ಪ್ರಕಾಶನ ಬೆಂಗಳೂರು, ೨೦೨೧.

೬. ಮಾಲತಿ ಎ.ಪಿ. : ಸ್ಮೃತಿಯಾನ ಪಾಂಚಜನ್ಯ ಪಬ್ಲಿಕೇಶನ್ಸ್ ಬೆಂಗಳೂರು, ೨೦೧೮.

೭. ಶೈಲಾ ಯು. : ಸಮನ್ವಯ ಸಾಹಿತ್ಯದ ಲೇಖಕಿ ಎ.ಪಿ. ಮಾಲತಿ ಕನ್ನಡ ಸಂಘ, ಕಾಂತಾವರ (ರಿ.) ಕಾರ್ಕಳ, ಉಡುಪಿ, ೨೦೧೬